ಇರ್ಫಾನ್ ನೀಡಿದ ಸಲಹೆ ಅಕೀಬ್ ಅವರಿಗೆ ದಾರಿದೀಪವಾಯಿತು.

138–140 ಕಿ.ಮೀ. ವೇಗದ ಎಸೆತಗಳನ್ನು ಹಾಕುವ ನಬಿ ಲೈನ್ ಮತ್ತು ಲೆಂಗ್ತ್‌ಗೆ ಹೆಚ್ಚು ಮಹತ್ವ ಕೊಡುತ್ತಾರೆ. ಹೊಸ ಚೆಂಡಿನಲ್ಲಿ ಇನ್ ಮತ್ತು ಔಟ್ ಸ್ವಿಂಗ್ ಮಾಡುವ ನಬಿ ರಿವರ್ಸ್ ಸ್ವಿಂಗ್ ಪರಿಣತಿ ಸಾಧಿಸಿದ್ದಾರೆ. ಲೇಟ್ ಮೂವ್‌ಮೆಂಟ್‌ನಲ್ಲಿರುವ ನಿಖರತೆ ಅವರ ಪ್ರಮುಖ ಅಸ್ತ್ರ. ಹುಬ್ಬಳ್ಳಿಯ ಕ್ರೀಡಾಂಗಣದಲ್ಲಿ ಬೌಲರ್‌ಗಳಿಗೆ ಹೆಚ್ಚು ನೆರವು ಇರಲಿಲ್ಲ. ಬ್ಯಾಟರ್‌ಗಳೇ ವಿಜೃಂಭಿಸಿದ್ದರು. ಆದರೂ ಆ ಪಿಚ್‌ನಲ್ಲಿ ನಬಿ ಐದು ವಿಕೆಟ್ ಗೊಂಚಲು ಗಳಿಸಿದರು. ಅದರಲ್ಲೂ ಕೆ.ಎಲ್. ರಾಹುಲ್, ಕರುಣ್ ನಾಯರ್, ಆರ್. ಸ್ಮರಣ್ ಮತ್ತು ಮಯಂಕ್ ಅಗರವಾಲ್ ಅವರಂತಹ ಖ್ಯಾತನಾಮರ ವಿಕೆಟ್‌ಗಳನ್ನೂ ತಮ್ಮ ಬುಟ್ಟಿಗೆ ಹಾಕಿಕೊಂಡರು. ಅಕೀಬ್ ಅವರು ದುಲೀಪ್ ಟ್ರೋಫಿ ಆಡುವಾಗ ಭಾರತ ತಂಡದ ಎಡಗೈ ವೇಗಿ ಅರ್ಷದೀಪ್ ಸಿಂಗ್ ಅವರ ಮೆಚ್ಚುಗೆಯ ಮಾತುಗಳಿಗೂ ಪಾತ್ರರಾಗಿದ್ದರು.

ಅಕೀಬ್ ಅವರಿಗೆ ಬೆಂಗಳೂರಿನ ನಂಟು ಕೂಡ ಇದೆ. ಅವರು ಇಲ್ಲಿಯ ಡಿವಿಷನ್ ಲೀಗ್ ಟೂರ್ನಿಯಲ್ಲಿ ಸ್ಥಳೀಯ ತಂಡದಲ್ಲಿ ಆಡಿದ್ದರು.



ಹುಬ್ಬಳ್ಳಿಯ ಕ್ರೀಡಾಂಗಣದಲ್ಲಿ ನಡೆದ ರಣಜಿ ಟ್ರೋಫಿ ಫೈನಲ್ ಪಂದ್ಯದಲ್ಲಿ ಅಕೀಬ್ ನಬಿ

ಅವರು 41 ಪ್ರಥಮ ದರ್ಜೆ ಪಂದ್ಯಗಳಲ್ಲಿ 156 ವಿಕೆಟ್ ಗಳಿಸಿದ್ದಾರೆ. 15 ಸಲ ಐದು ವಿಕೆಟ್ ಗೊಂಚಲುಗಳನ್ನು ದಾಖಲಿಸಿದ್ದಾರೆ. ಇದೇ ರಣಜಿ ಋತುವಿನಲ್ಲಿ 36 ಲಿಸ್ಟ್ ಎ ಪಂದ್ಯಗಳಿಂದ 56 ಹಾಗೂ ಟಿ20 ಮಾದರಿಯಲ್ಲಿ 43 ವಿಕೆಟ್ ಗಳಿಸಿದ್ದಾರೆ.

ಗಲ್ಲಿ ಕ್ರಿಕೆಟ್‌ನಿಂದ ಆರಂಭವಾದ ಅವರ ಪಯಣ ಈಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಆಡುವ ಹಂತಕ್ಕೆ ಬಂದು ತಲುಪಿದೆ. ಒಂದು ಸಮಯದಲ್ಲಿ ಸ್ಪೈಕ್ಸ್ ಕೊಳ್ಳಲು ಪರದಾಡಿದ್ದ ನಬಿ ಈಗ ಕೋಟ್ಯಧಿಪತಿಯೂ ಹೌದು. ಈ ವರ್ಷದ ಇಂಡಿಯನ್ ಪ್ರೀಮಿಯರ್ ಲೀಗ್ ಬಿಡ್‌ನಲ್ಲಿ ಅವರು ₹8.40 ಕೋಟಿ ಪಡೆದಿದ್ದಾರೆ. ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿ ಅವರು ಆಡಲಿದ್ದಾರೆ. ಅದೇ ತಂಡದಲ್ಲಿ ಕನ್ನಡಿಗ ಕೆ.ಎಲ್. ರಾಹುಲ್ ಕೂಡ ಇದ್ದಾರೆ! ■

# ಚಿತ್ತಾಕರ್ಷಕ ಮರದ ಸೇತುವೆ

■ ಎಚ್.ಎಸ್. ನಂದಕುಮಾರ್

ಸ್ವಿಟ್ಜರ್ಲೆಂಡಿನ ಲ್ಯೂಸರ್ನ್ ನಗರದಲ್ಲಿರುವ ಈ ಸೇತುವೆ ಹೆಸರು ‘ಚಾಪೆಲ್ ಬ್ರಿಡ್ಜ್’. 14ನೇ ಶತಮಾನದಲ್ಲಿ ನಿರ್ಮಿಸಲಾದ, ಮಾಡನ್ನು ಹೊಂದಿರುವ ಈ ಸೇತುವೆಯನ್ನು ಸಂಪೂರ್ಣವಾಗಿ ಮರದಿಂದ ನಿರ್ಮಿಸಲಾಗಿರುವುದು ವಿಶೇಷ. ಜರ್ಮನ್ ಭಾಷೆಯಲ್ಲಿ ‘ಕಪೆಲ್ ಬ್ರ್ಯೂಕೆ’ ಹಾಗೂ ಇಂಗ್ಲಿಷಿನಲ್ಲಿ ‘ಚಾಪೆಲ್ ಬ್ರಿಡ್ಜ್’ ಎಂದು ಕರೆಯಲಾಗುವ ಈ ಸೇತುವೆ ಮೊದಲು ನಗರದ ಕೋಟೆಯ ಹೊರ ಆವರಣದ ಭಾಗವಾಗಿತ್ತು. ಇದರ ಹತ್ತಿರದಲ್ಲೇ ಇರುವ ಸೇಂಟ್ ಪೀಟರ್ಸ್ ಚಾಪೆಲ್‌ನಿಂದಾಗಿ ಈ ಸೇತುವೆಗೆ ‘ಚಾಪೆಲ್ ಬ್ರಿಡ್ಜ್’ ಎಂದು ಹೆಸರಿಸಲಾಗಿದೆ.

ಇದು ನಿರ್ಮಾಣವಾದಾಗ ಇದರ ಉದ್ದ 285 ಮೀಟರ್ ಇತ್ತು. ಆದರೆ 19ನೇ ಶತಮಾನದಲ್ಲಿ ಇದರ ಉದ್ದ ಕಡಿಮೆಯಾಗಿ ಪ್ರಸ್ತುತ 205 ಮೀಟರ್ ಇದೆ. ಹದಿನೇಳನೆಯ ಶತಮಾನದಲ್ಲಿ ಹ್ಯಾನ್ಸ್ ಹೆನ್ರಿಚ್ ವಾಗ್ಮನ್ ಎಂಬ ಚಿತ್ರ ಕಲಾವಿದ ಪುನರುತ್ಥಾನದ (**Renaissance**) ಚಿತ್ರಕಲೆಯ ಮಾದರಿಯಲ್ಲಿ ತ್ರಿಕೋನಾಕಾರದ ನೂರ ಹನ್ನೊಂದು ಮರದ ಹಲಗೆಗಳಲ್ಲಿ ರಚಿಸಿದ, ಲ್ಯೂಸರ್ನ್ ನಗರದ ಇತಿಹಾಸ ಸಾರುವ ಚಿತ್ರಗಳನ್ನು ಈ ಸೇತುವೆಯ ಮಾಡಿಗೆ ಅಳವಡಿಸಲಾಯಿತು. 1993ರಲ್ಲಿ ಆದ ಬೆಂಕಿ ಅವಘಡದಲ್ಲಿ 81 ಚಿತ್ರಪಟಗಳು ಸುಟ್ಟುಹೋದವು. ಈಗ ಸೇತುವೆಯ ಎರಡು ತುದಿಯಲ್ಲಿ ಮೂವತ್ತು ಚಿತ್ರಪಟಗಳಿದ್ದು ಮಧ್ಯದಲ್ಲಿ ಖಾಲಿಯಾದ ತ್ರಿಕೋನಾಕಾರದ ಹಲಗೆಗಳನ್ನು ಬೆಂಕಿ ಅನಾಹುತದ ಭೀಕರತೆಯನ್ನು ನೆನಪಿಸಲು ಇರಿಸಿದ್ದಾರೆ.

ಇಡೀ ವಿಶ್ವದಲ್ಲಿ ಚಿತ್ರ ಕಲಾಕೃತಿ ಇರುವ ಕೇವಲ ಎರಡು ಸೇತುವೆಗಳಲ್ಲಿ ಇದೂ ಒಂದು. (ಇನ್ನೊಂದು ಚಿತ್ರ ಕಲಾಕೃತಿಗಳಿರುವ ಸೇತುವೆಯೂ





ಸ್ಥಳ ವಿಶೇಷ

ಲ್ಯೂಸರ್ನ್ ನಗರದಲ್ಲೇ ಇದೆ). ಯೂರೋಪಿನಲ್ಲಿ ನಿರ್ಮಿಸಲಾದ ಅತ್ಯಂತ ಹಳೆಯದಾದ, ಮಾಡನ್ನು ಹೊಂದಿರುವ ಸೇತುವೆ ಇದಾಗಿದೆ.

278 ಹೂವಿನ ಬುಟ್ಟಿಗಳಲ್ಲಿ ಈ ಸೇತುವೆಯ ಎರಡೂ ಬದಿಗಳಲ್ಲಿ ಆಲಂಕಾರಿಕ ಹೂವುಗಳನ್ನು ಇರಿಸಿರುವುದು ಈ ಸೇತುವೆಯ ಅಂದವನ್ನು ಹೆಚ್ಚಿಸಿದೆ. ಈ ಸೇತುವೆ ಈಗ ಲ್ಯೂಸರ್ನ್ ನಗರದ ಆಕರ್ಷಕ ಪ್ರವಾಸಿ ತಾಣಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ. ■